


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ದಂಡಯಾತ್ರೆಗಳ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-05-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮೋತ ಯುದ್ಧದ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಈ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಹೀಗಿವೆ: ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ರವಾಹ(ರ)ರನ್ನು ಹಝ್ರ್‌ರತ್ ಪೈಗಂಬರ್(ಸ) ಬೀಳ್ಕೊಡುವಾಗ, ಹಝ್ರ್‌ರತ್ ಅಬ್ದುಲ್ಲಾಹ್(ರ) ಹೀಗೆ ಕೇಳಿದರು: "ಅಲ್ಲಾಹನ ರಸೂಲರೇ(ಸ), ನೀವು ಹೇಳಿದ್ದಾಗಿ ನಾನು ನೆನಪಿಟ್ಟುಕೊಳ್ಳಲಿಕ್ಕಾಗಿ ಯಾವುದಾದರೂ ಸಂಗತಿಯ ಬಗ್ಗೆ ನನಗೆ ಆದೇಶ ನೀಡಿರಿ." ಹಝ್ರ್‌ರತ್ ಪೈಗಂಬರ್(ಸ) ಉತ್ತರಿಸಿದರು: "ನಾಳೆ ನೀವು ಕಡಿಮೆ ಸಜ್ದಗಳನ್ನು ಮಾಡಲ್ಪಡುವ ನಗರವನ್ನು ತಲುಪುತ್ತಿದ್ದೀರಿ. ಆದ್ದರಿಂದ ನೀವು ಅಲ್ಲಿ ಹೆಚ್ಚು ಸಜ್ದಗಳನ್ನು ಮಾಡಿರಿ."

(ಹುಝೂರ್ ಹೇಳಿದರು:) ಇದು ಬಹಳ ದೊಡ್ಡ ಉಪದೇಶವಾಗಿದೆ, ಇಂದು ನಾವು ವಾಸಿಸುತ್ತಿರುವ ದೇಶಗಳಲ್ಲಿ ಜನರು ಅಲ್ಲಾಹನನ್ನು ಮರೆತಿದ್ದಾರೆ, ಈ ಕಾಲದಲ್ಲಿ ಅಹ್ಮದಿಯರು ತಮ್ಮ ಆರಾಧನೆಗಳ ಬಗ್ಗೆ ಬಹಳ ಹೆಚ್ಚು ಗಮನಹರಿಸಬೇಕು. ಅನಂತರ ಅವರ ಕೋರಿಕೆಯ ಮೇರೆಗೆ ಹಝ್ರ್‌ರತ್ ಪೈಗಂಬರ್(ಸ) ಇನ್ನೂ ಹೀಗೆ ಹೇಳಿದರು: "ಅಲ್ಲಾಹನನ್ನು ಸ್ಮರಿಸುತ್ತಿರಿ, ಅವನು ಪ್ರತಿಯೊಂದು ವಿಷಯದಲ್ಲೂ ನಿಮ್ಮ ಸಹಾಯಕರನಾಗಿರುತ್ತಾನೆ." ಹಝ್ರ್‌ರತ್ ಅಬ್ದುಲ್ಲಾಹ್(ರ) ಹೊರಡಲು ಅಣಿಯಾದಾಗ ಮತ್ತೆ ಮರಳಿ ಬಂದು ಹೇಳಿದರು: ಅಲ್ಲಾಹನ ರಸೂಲರೇ, ಅಲ್ಲಾಹನು ವಿತ್ರ್ (ಏಕನು) ಆಗಿದ್ದಾನೆ ಮತ್ತು ಏಕತೆಯನ್ನು ಇಷ್ಟಪಡುತ್ತಾನೆ. ಆಗ ಹಝ್ರ್‌ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಎಲ್ಯೆ ಇಬ್ನ್ ರವಾಹ, ಪ್ರಶ್ನೆಗಳನ್ನು ಕೇಳುತ್ತಲೇ ಹೋಗುತ್ತೀಯಾ? ಈಗ ನಿಲ್ಲಿಸು. ನೀವು ದುರ್ಬಲಗೊಳ್ಳುವಾಗ ಮತ್ತು ನೀನು ಹತ್ತು ಜನರಿಗೆ ಕೆಡುಕು ಮಾಡಿದ್ದರೂ ಕೂಡ ಒಬ್ಬನಿಗೆ ಒಳ್ಳೆಯದು ಮಾಡುವುದರಿಂದ ಹಿಂಜರಿಯಬೇಡ." ಅಂದರೆ, ಅಷ್ಟೊಂದು ಕೆಡುಕುಗಳ ನಂತರವೂ ನೀವು ಅಲ್ಲಾಹನ ಸಲುವಾಗಿ ಒಳಿತು ಮಾಡಿದರೆ, ನಿಮ್ಮ ಹೃದಯದಲ್ಲಿ ಅಲ್ಲಾಹನ ಭಯವಿದ್ದರೆ, ಅಲ್ಲಾಹನು ಕ್ಷಮಿಸುವವನಾಗಿದ್ದಾನೆ. ಒಟ್ಟಿನಲ್ಲಿ, ಅಲ್ಲಾಹನು ಒಳಿತು ಮಾಡುವವರನ್ನು ಕ್ಷಮಿಸುತ್ತಾನೆ, ಅವನ ಕರುಣೆ ಬಹಳ ವಿಸ್ತಾರವಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಒಳಿತನ್ನು ಮಾಡಲು ಮತ್ತು ಕೆಡುಕಿನಿಂದ ದೂರವಿರಲು ಪ್ರಯತ್ನಿಸಬೇಕು. ಪ್ರತಿ ಬಾರಿಯೂ ಹತ್ತು ಕೆಡುಕುಗಳನ್ನು ಮಾಡಿ ನಂತರ ಒಂದು ಒಳಿತನ್ನು ಮಾಡುವುದಲ್ಲ. ಹೇಗಿದ್ದರೂ ಯಾವುದೇ ಒಳಿತು ಮಾಡುವುದರಿಂದ ಹಿಂಜರಿಯಬೇಡ ಎಂದು ಹಝ್ರ್‌ರತ್ ಪೈಗಂಬರ್(ಸ) ಹೇಳಿದಾಗ, ಹಝ್ರ್‌ರತ್ ಅಬ್ದುಲ್ಲಾಹ್(ರ) ಹೇಳಿದರು: ಹೇ ಅಲ್ಲಾಹನ ರಸೂಲರೇ(ಸ), ಇನ್ನು ನಾನು ನಿಮ್ಮಿಂದ ಯಾವುದೇ ಪ್ರಶ್ನೆ ಕೇಳುವುದಿಲ್ಲ.

ಹಝ್ರ್‌ರತ್ ಅಬ್ದುಲ್ಲಾಹ್(ರ)ರನ್ನು ಬೀಳ್ಕೊಡಲಾದಾಗ ಅವರು ಅತ್ತುಬಿಟ್ಟರು. ಈ ಕುರಿತು ಜನರು ಅವರೊಡನೆ ಕೇಳಿದಾಗ ಅವರು ಅಲ್ಲಾಹನ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳಿದರು: "ನನಗೆ ಈ ಲೋಕದ ಮೇಲಾಗಲೀ ಅಥವಾ ನಿಮ್ಮ ಮೇಲಾಗಲೀ ಪ್ರೀತಿಯಿಲ್ಲ. ಬೆಂಕಿಯ ಬಗ್ಗೆ ಉಲ್ಲೇಖವಿರುವ ವಚನವನ್ನು ಹಝ್ರ್‌ರತ್ ಪೈಗಂಬರ್(ಸ) ಪಠಿಸುವುದಾಗಿ ನಾನು ಆಲಿಸಿದ್ದೇನೆ ಮತ್ತು ಆ ಬೆಂಕಿಯನ್ನು ಪ್ರವೇಶಿಸಿದ ನಂತರ ನನ್ನ ಸ್ಥಿತಿ ಏನಾಗುವುದು ಎಂದು ನನಗೆ ಗೊತ್ತಿಲ್ಲ." ಆಗ ಜನರು ಅವರನ್ನು ಸಮಾಧಾನಪಡಿಸಿದರು ಮತ್ತು "ನೀವೆಲ್ಲರೂ ಕ್ಷೇಮದಿಂದ ನಮ್ಮ ಕಡೆಗೆ ಹಿಂತಿರುಗಿ ಬನ್ನಿ" ಎಂದು ದುಆ ಮಾಡಿದರು.

ಆ ದಂಡಯಾತ್ರೆಯಲ್ಲಿ ಭಾಗವಹಿಸಿದ ಎಲ್ಲರು ಜುಮಾ ದಿನದಂದು ಹೊರಟುಹೋದರು. ಆದರೆ ಹಝ್ರ್‌ರತ್ ಪೈಗಂಬರ್(ಸ)ರ ಹಿಂದೆ ಜುಮಾ ನಮಾಝ್ ನಿರ್ವಹಿಸಿ ಅವರೊಂದಿಗೆ ಸೇರಿಕೊಳ್ಳುತ್ತೇನೆ ಎಂದು ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ರವಾಹ(ರ) ಯೋಚಿಸಿದರು. ಹಝ್ರ್‌ರತ್ ಪೈಗಂಬರ್(ಸ) ಅವರನ್ನು ನೋಡಿ ಕೇಳಿದರು: "ನಿಮ್ಮ ಸಂಗಡಿಗರೊಂದಿಗೆ ಹೊರಡುವುದರಿಂದ ನಿಮ್ಮನ್ನು ಯಾವ ಸಂಗತಿ ತಡೆದು ನಿಲ್ಲಿಸಿದೆ?" ಆಗ ಹಝ್ರ್‌ರತ್ ಅಬ್ದುಲ್ಲಾಹ್(ರ) ಹೀಗೆ ಉತ್ತರಿಸಿದರು: "ನಾನು ನಿಮ್ಮೊಂದಿಗೆ ಜುಮಾ ನಮಾಝ್ ನಿರ್ವಹಿಸಿ ನನ್ನ ಸಂಗಡಿಗರನ್ನು ಸೇರಿಕೊಳ್ಳಲು ಬಯಸಿದೆ." ಆಗ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: "ಭೂಮಿಯಲ್ಲಿರುವುದನ್ನೆಲ್ಲ ನೀವು ಖರ್ಚು ಮಾಡಿದರೂ, ಆ ದಂಡಯಾತ್ರೆಯಲ್ಲಿ ಹೊರಟುಹೋದವರಿಗೆ ಲಭಿಸುವ ಅನುಗ್ರಹವನ್ನು ನಿಮಗೆ ಪಡೆಯಲು ಸಾಧ್ಯವಲ್ಲ."

ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ನಿಪುಣ ಕುದುರೆಸವಾರರಾಗಿದ್ದರು: ಅವರು ಕೂಡ ಆ ದಂಡಯಾತ್ರೆಯಲ್ಲಿ ಒರ್ವ ಸಾಮಾನ್ಯ ಸೈನಿಕನಂತೆ ಭಾಗವಹಿಸಿದ್ದರು. ಆ ದಂಡಯಾತ್ರೆ ಹೊರಡುವ ಸಮಯದಲ್ಲಿ ಹಝ್ರ್‌ರತ್ ಖಾಲಿದ್(ರ) ಇಸ್ಲಾಂ ಧರ್ಮ ಸ್ವೀಕರಿಸಿ ಕೇವಲ ಮೂರು ತಿಂಗಳುಗಳಾಗಿದ್ದವು. ಮುಸ್ಲಿಮರು ಹೊರಡುತ್ತಿದ್ದಂತೆಯೇ, ಶತ್ರುಗಳಿಗೆ ಮುಸ್ಲಿಮರ ಹೊರಡುವಿಕೆಯ ಸುದ್ದಿ ಸಿಕ್ಕಿತು ಮತ್ತು ಅವರು ಕೂಡ ಸೈನ್ಯವನ್ನು ಸಿದ್ಧಪಡಿಸಲು ಪ್ರಾರಂಭಿಸಿದರು. ಅವರ ಸೈನ್ಯದ ಸಂಖ್ಯೆ ಸುಮಾರು ಒಂದು ಲಕ್ಷದಷ್ಟಿದೆ ಎಂದು ಮುಸ್ಲಿಮರಿಗೆ ಸುದ್ದಿ ಲಭಿಸಿತು. ಈ ಸಂದರ್ಭದಲ್ಲಿ ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ರವಾಹ(ರ) ಸಹಾಬಿಯರೊಳಗೆ ಧೈರ್ಯವನ್ನು ತುಂಬಿಸಿದರು ಮತ್ತು ಅವರೊಡನೆ ಹೀಗೆ ಹೇಳಿದರು: "ಶಹಾದತ್ ಮತ್ತು ವಿಜಯ ಎರಡೂ ನಿಮಗೆ ಉತ್ತಮ ಹಾಗೂ ಇದೇ ಬಯಕೆಯಿಂದ ನೀವು

ಹೊರಟಿದ್ದೀರಿ." ಇದನ್ನು ಕೇಳಿದ ಸೈನಿಕರೆಲ್ಲರೂ "ಇಬ್ನು ರವಾಹ ಹೇಳಿದ್ದು ಸರಿ" ಎಂದು ಹೇಳಿ ಮುಂದೆ ಸಾಗಿದಾಗ, ಮುಶಾರಿಫಿನ ಗ್ರಾಮದ ಬಳಿ ರೋಮನ್ನರನ್ನು ಮತ್ತು ಅರೇಬಿಯರನ್ನು ಒಳಗೊಂಡಿದ್ದ ಹರ್‌ಕ್ಯುಲಸಿನ ಸೈನ್ಯ ಸಹಾಬಿಯರ ಮುಂದೆ ಬರುವುದಾಗಿ ಕಂಡರು. ಮುಸ್ಲಿಮರು ಅವರನ್ನು ನೋಡಿದಾಗ, ಮೋತ ಎಂದು ಕರೆಯಲ್ಪಡುವ ಗ್ರಾಮದ ಕಡೆಗೆ ಸರಿದರು. ಈ ಸ್ಥಳದಲ್ಲಿ ಮುಸ್ಲಿಮರು ಯುದ್ಧಕ್ಕೆ ತಯಾರಿ ನಡೆಸಿದರು, ಹಝ್ರತ್ ಅಬೂ ಹುರೈರಾ(ರ) ಈ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ: "ಶತ್ರುಗಳು ನಮ್ಮ ಹತ್ತಿರ ಬಂದರು. ನಾವು ಇಷ್ಟು ಸೈನಿಕರು, ಇಷ್ಟು ಉತ್ತಮ ತಯಾರಿ, ಇಷ್ಟೆಲ್ಲ ಕುದುರೆಗಳು ಮತ್ತು ಚಿನ್ನವನ್ನು ಹಿಂದೆಂದೂ ನೋಡಿರಲಿಲ್ಲ, ಅದನ್ನು ನೋಡಿ ನಾವು ಆಶ್ಚರ್ಯಚಕಿತರಾದೆವು." ಆಗ ಹಝ್ರತ್ ಸಾಬಿತ್(ರ) ನನ್ನೊಡನೆ ಹೀಗೆ ಹೇಳಿದರು: "ನೀವು ದೊಡ್ಡ ಸೈನ್ಯವನ್ನು ನೋಡುತ್ತಿದ್ದೀರಿ. ಆದರೆ ನೀವು ನಮ್ಮೊಂದಿಗೆ ಬದ್ರ್ ಯುದ್ಧದಲ್ಲಿ ಭಾಗವಹಿಸಿಲ್ಲ. ಅಲ್ಲಿ ನಾವು ವಿಜಯ ಸಾಧಿಸಿದ್ದು ಬಹುಸಂಖ್ಯೆಯ ಕಾರಣದಿಂದಲ್ಲ."

ಯುದ್ಧ ಪ್ರಾರಂಭವಾದಾಗ, ಘೋರ ಹೋರಾಟ ನಡೆಯಿತು. ಹಝ್ರತ್ ಝೈದ್(ರ) ಹಝ್ರತ್ ಪೈಗಂಬರ್(ಸ)ರ ಧ್ವಜದೊಂದಿಗೆ ಹೋರಾಡಿದರು ಮತ್ತು ಧೈರ್ಯದಿಂದ ಹುತಾತ್ಮರಾದರು. ಅನಂತರ ಹಝ್ರತ್ ಜಾಫರ್(ರ) ಇಸ್ಲಾಂ ಧರ್ಮದ ಧ್ವಜವನ್ನು ಹಿಡಿದು ಹೋರಾಡಿದರು. ಕೊನೆಗೆ ಅವರು ಕೂಡ ಹುತಾತ್ಮರಾದರು. ಒಂದು ವರದಿಯ ಪ್ರಕಾರ, ಹಝ್ರತ್ ಜಾಫರ್ ಬಿನ್ ಅಬೂ ತಾಲಿಬ್(ರ) ತಮ್ಮ ಬಲಗೈಯಲ್ಲಿ ಧ್ವಜವನ್ನು ಹಿಡಿದಿದ್ದರು, ಅದನ್ನು ತುಂಡರಿಸಲಾದಾಗ ಅವರು ಎಡಗೈಯಲ್ಲಿ ಧ್ವಜವನ್ನು ಹಿಡಿದರು, ಅದೂ ಕತ್ತರಿಸಲ್ಪಟ್ಟಾಗ ಅವರು ಇಸ್ಲಾಂ ಧರ್ಮದ ಧ್ವಜವನ್ನು ತಮ್ಮ ಮೊಣಕೈಗಳಿಂದ ಎದೆಗೆ ಅಪ್ಪಿಕೊಂಡು ಹಿಡಿದರು. ಹುತಾತ್ಮರಾದಾಗ ಅವರಿಗೆ 33 ವರ್ಷ ಪ್ರಾಯವಿತ್ತು. ಹುತಾತ್ಮರಾದ ನಂತರ ಅವರ ದೇಹದ ಮೇಲೆ ಅರವತ್ತಕ್ಕೂ ಹೆಚ್ಚು ಗಾಯಗಳು ಕಂಡುಬಂದವು, ಅವುಗಳಲ್ಲಿ ಒಂದು ಗಾಯವೂ ಅವರ ಬೆನ್ನಿನ ಮೇಲೆ ಇರಲಿಲ್ಲ.

ಅವರು ಹುತಾತ್ಮರಾದ ನಂತರ ಇಸ್ಲಾಮಿನ ಸೈನ್ಯದ ಧ್ವಜವನ್ನು ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ) ಹಿಡಿದುಕೊಂಡರು. ಯುದ್ಧದ ಮೊದಲು ಸ್ವಲ್ಪ ಶಕ್ತಿಯನ್ನು ಗಳಿಸಲಿಕ್ಕಾಗಿ ಅವರಿಗೆ ಒಂದು ತುಣುಕು ಮಾಂಸವನ್ನು ನೀಡಲಾಯಿತು. ಅವರು ಅದರಿಂದ ಸ್ವಲ್ಪ ಭಾಗವನ್ನು ತುಂಡುಮಾಡಿದಾಗ ಒಂದು ಕಡೆಯಿಂದ ಖಡ್ಗಗಳ ಸದ್ದು ಕೇಳಿಸಿತು. ಅವರು ಮನಸ್ಸಿನಲ್ಲೇ ಹೀಗೆ ಹೇಳಿದರು: "ನೀನು ಇನ್ನೂ ಈ ಲೋಕದಲ್ಲಿಯೇ ಇದ್ದೀಯಾ," ಅಂದರೆ ಯುದ್ಧ ಪ್ರಾರಂಭವಾಗಿದೆ ಮತ್ತು ನೀನು ಮಾಂಸ ತಿನ್ನುತ್ತಿದ್ದೀಯಾ. ಅವರು ಆ ಮಾಂಸದ ತುಂಡನ್ನು ಅಲ್ಲೇ ಬಿಟ್ಟು ತಕ್ಷಣ ಯುದ್ಧಕ್ಕೆ ಧುಮುಕಿದರು ಮತ್ತು ಬಹಳ ಶೌರ್ಯದಿಂದ ಹೋರಾಡುತ್ತಾ ಹುತಾತ್ಮರಾದರು. ಅವರ ಕೈಯಿಂದ ಧ್ವಜ ಬಿದ್ದುಹೋಯಿತು. ಅಬ್ದುಲ್ಲಾಹ್ ಬಿನ್ ರವಾಹ(ರ) ಹುತಾತ್ಮರಾದಾಗ ಮುಸ್ಲಿಮರು ಹಿರಿದಾದ ನಷ್ಟವನ್ನು ಅನುಭವಿಸಿದರು, ಇಬ್ಬರು ಮುಸ್ಲಿಮರು ಕೂಡ ಒಟ್ಟಾಗಿ ಹೋರಾಡುತ್ತಿರುವುದು ಕಂಡುಬರುತ್ತಿರಲಿಲ್ಲ. ಆಗ ಒಬ್ಬ ಅನ್ಸಾರಿ ವ್ಯಕ್ತಿ ಇಸ್ಲಾಂ ಧರ್ಮದ ಧ್ವಜವನ್ನು ಎತ್ತಿಕೊಂಡರು ಮತ್ತು ಓಡುತ್ತಾ ಬಂದು ಜನರ ಮುಂದೆ ಧ್ವಜವನ್ನು ನೆಟ್ಟರು. ಅನಂತರ ಅವರು ಹೇಳಿದರು: "ಎಲೈ ಜನರೇ, ನನ್ನ ಕಡೆಗೆ ಬನ್ನಿರಿ." ಜನರು ಅವರ ಬಳಿಗೆ ಹೋದರು. ಜನರ ಸಂಖ್ಯೆ ಹೆಚ್ಚಾದಾಗ ಅವರು ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ಬಳಿಗೆ ಹೋದರು. ಹಝ್ರತ್ ಖಾಲಿದ್(ರ) ಹೇಳಿದರು, "ನಾನು ಧ್ವಜವನ್ನು ನಿಮ್ಮಿಂದ ತೆಗೆದುಕೊಳ್ಳುವುದಿಲ್ಲ, ನೀವು ಅದಕ್ಕೆ ಹೆಚ್ಚು ಅರ್ಹರು." ಆಗ ಆ ಅನ್ಸಾರಿ ವ್ಯಕ್ತಿ ಹೇಳಿದರು, "ನಾನು ಈ ಧ್ವಜವನ್ನು ಹಿಡಿದಿರುವುದೇ ನಿಮಗಾಗಿ." ಹಝ್ರತ್ ಖಾಲಿದ್(ರ) ಧ್ವಜವನ್ನು ಹಿಡಿದಾಗ ಅವರು ಜನರ ರಕ್ಷಣೆ ಮಾಡಿದರು, ಅವರನ್ನು ಒಟ್ಟುಗೂಡಿಸಿ ಇಸ್ಲಾಂ ಧರ್ಮದ ಸೈನ್ಯವನ್ನು ಒಂದು ಕಡೆಗೆ ಸರಿಸಿದರು. ಶತ್ರುಗಳು ಕೂಡ ಅವರಿಂದ ದೂರಸರಿದರು. ಹಝ್ರತ್ ಖಾಲಿದ್(ರ) ಜನರನ್ನು ರಕ್ಷಿಸಿ ಹಿಂದಕ್ಕೆ ಕರೆತಂದರು. ಆಗ ರೋಮನ್ನರಿಂದ ದೂರ ಸರಿಯುವುದೇ ನಿಜವಾದ ರಕ್ಷಣೆಯಾಗಿತ್ತು ಎಂದಾಗಿತ್ತು ಇಬ್ನ್ ಇಸ್‌ಹಾಕ್‌ರ ಅಭಿಪ್ರಾಯ. ಏಕೆಂದರೆ ಆ ಸಮಯದಲ್ಲಿ ಮೂರು ಸಾವಿರ ಮುಸ್ಲಿಮರಲ್ಲಿ ಎರಡು ಸಾವಿರ ಮುಸ್ಲಿಮರು ಶತ್ರು ಸೈನ್ಯದೊಂದಿಗೆ ಬೆರೆತುಹೋಗಿದ್ದರು, ಅಂದರೆ ಎರಡೂ ಸೈನ್ಯಗಳು ಸಂಪೂರ್ಣವಾಗಿ ಒಂದಕ್ಕೊಂದು ಹೆಣೆದುಕೊಂಡಿದ್ದವು. ಶತ್ರುಗಳು ಸಂಪೂರ್ಣವಾಗಿಯೂ ಮುಸ್ಲಿಮರನ್ನು ಸುತ್ತುವರೆದಿದ್ದರು ಮತ್ತು ಅವರು ಮುಸ್ಲಿಮರ ಸುತ್ತ ಚೆನ್ನಾಗಿ ಒಟ್ಟುಗೂಡಿದ್ದರು. ಅಂತಹ ಸಮಯದಲ್ಲಿ ಮುಸ್ಲಿಮರನ್ನು ರಕ್ಷಿಸಿ ಹೊರತೆಗೆಯುವುದೇ ವಿಜಯವಾಗಿತ್ತು. (ವಿಜಯಕ್ಕೂ ಅನೇಕ ರೂಪಗಳಿವೆ ಎಂದು ಹುಝೂರ್ ಹೇಳಿದರು.)

ಜನರಿಗೆ ಯಾವುದೇ ಸುದ್ದಿ ಲಭಿಸುವುದಕ್ಕೆ ಮೊದಲೇ ಹಝ್ರತ್ ಝೈದ್(ರ), ಹಝ್ರತ್ ಜಾಫರ್(ರ) ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ)ರ ಶಹಾದತಿನ ಬಗ್ಗೆ ಹಝ್ರತ್ ಪೈಗಂಬರ್(ಸ) ಜನರಿಗೆ ಹೀಗೆ ತಿಳಿಸಿದರು. "ಝೈದ್ ಧ್ವಜವನ್ನು ತೆಗೆದುಕೊಂಡರು ಮತ್ತು ಅವರು ಹುತಾತ್ಮರಾದರು. ಅನಂತರ ಜಾಫರ್ ಧ್ವಜವನ್ನು ತೆಗೆದುಕೊಂಡರು ಮತ್ತು ಅವರು ಸಹ ಹುತಾತ್ಮರಾದರು. ಅನಂತರ ಇಬ್ನ್ ರವಾಹ ಧ್ವಜವನ್ನು ತೆಗೆದುಕೊಂಡರು ಮತ್ತು ಅವರು ಕೂಡ ಹುತಾತ್ಮರಾದರು." ಹಝ್ರತ್ ಪೈಗಂಬರ್(ಸ)ರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿದ್ದವು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: "ನಂತರ ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗ ಧ್ವಜವನ್ನು ಎತ್ತಿಕೊಂಡರು ಮತ್ತು ಅಲ್ಲಾಹನು ಅವರ ಕೈಯಿಂದ ಮುಸ್ಲಿಮರಿಗೆ ವಿಜಯವನ್ನು ನೀಡಿದನು." ಅಂದಿನಿಂದ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು **ಸೈಫುಲ್ಲಾಹ್** ಅಂದರೆ ಅಲ್ಲಾಹನ ಖಡ್ಗ ಎಂದು ಕರೆಯಲಾಯಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇಸ್ಲಾಂ ಧರ್ಮದ ಸೈನ್ಯದ ನೇತೃತ್ವವನ್ನು ಹಝ್ರತ್ ಖಾಲಿದ್(ರ) ವಹಿಸಿಕೊಂಡಾಗ, ಅವರು ಸೈನ್ಯದ ಮುಂಭಾಗವನ್ನು ಹಿಂಭಾಗಕ್ಕೆ ಮತ್ತು ಹಿಂಭಾಗವನ್ನು ಮುಂಭಾಗಕ್ಕೆ, ಬಲಭಾಗವನ್ನು ಎಡಕ್ಕೆ ಮತ್ತು ಎಡಭಾಗವನ್ನು ಬಲಕ್ಕೆ ಸರಿಸಿದರು ಮತ್ತು ಜೋರಾಗಿ ಘೋಷಣೆಗಳನ್ನು ಕೂಗಿದರು. ಇದರಿಂದ ಮುಸ್ಲಿಮರಿಗೆ ಹೆಚ್ಚಿನ ಸಹಾಯ ಬಂದಿದೆ ಎಂದು ಶತ್ರುಗಳು ಭಾವಿಸಿಕೊಂಡು ಹಿಮ್ಮೆಟ್ಟಿದರು. ನಂತರ ಖಾಲಿದ್(ರ) ಮುಸ್ಲಿಮರನ್ನು ರಕ್ಷಿಸಿ ಮರಳಿ ಬಂದರು.

ಧ್ವಜದ ಗೌರವ ಮತ್ತು ಮರ್ಯಾದೆಯ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳುತ್ತಾರೆ: "ಯಾವುದೇ ಒಂದು ಸಮುದಾಯದ ಜನರ ಹೃದಯದಲ್ಲಿ ಅವರ

ಧ್ವಜದ ಮಹತ್ವವನ್ನು ಸ್ಥಾಪಿಸುವಾಗ, ಆ ಗೌರವವು ಅವರನ್ನು ತಮ್ಮ ಧ್ವಜದ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಬೇಕಾದರೂ ಹಿಂಜರಿಯದೆ ತ್ಯಾಗ ಮಾಡಲು ಸಿದ್ಧಗೊಳಿಸುತ್ತದೆ, ಏಕೆಂದರೆ ಅದು ಕೇವಲ ಒಂದು ಕೋಲು ಮತ್ತು ಬಟ್ಟೆಯ ವಿಷಯವಲ್ಲ, ಬದಲಾಗಿ ಅಲ್ಲಿ ಸಮುದಾಯದ ಗೌರವದ ಪ್ರಶ್ನೆ ಇರುತ್ತದೆ. ಅದು ಸಾಂಕೇತಿಕ ಭಾಷೆಯಲ್ಲಿ ಧ್ವಜದ ರೂಪದಲ್ಲಿ ಅವರ ಮುಂದೆ ಇರುತ್ತದೆ."

(ಈ ಪ್ರಸ್ತಾಪ ಮುಂದುವರಿಯುವುದು ಎಂದು ಹೇಳಿದ ನಂತರ ಹುಝೂರ್ ಲೋಕದ ಪ್ರಚಲಿತ ಪರಿಸ್ಥಿತಿಗಳಿಗಾಗಿ ಪ್ರಾರ್ಥನೆಗಳನ್ನು ಮಾಡುತ್ತಾ ಇರಬೇಕೆಂಬುದರ ಬಗ್ಗೆ ಗಮನ ಸೆಳೆಯುತ್ತಾ ಹೀಗೆ ಹೇಳಿದರು:) ವಿಶೇಷವಾಗಿ ಇತ್ತೀಚಿನ ಪಾಕಿಸ್ತಾನ ಮತ್ತು ಭಾರತದ ಪರಿಸ್ಥಿತಿಗಳಿಗಾಗಿ ದುಆ ಮಾಡಿರಿ. ಅಲ್ಲಾಹನು ದೌರ್ಜನ್ಯವನ್ನು ಕೊನೆಗೊಳಿಸಲಿ. ಪೀಡಿತರನ್ನು ರಕ್ಷಿಸಲಿ. ಯುದ್ಧಗಳ ಕಡೆಗೆ ಸಾಗುವುದನ್ನು ಬಿಟ್ಟು ಶಾಂತಿ ಮತ್ತು ಸೌಹಾರ್ದತೆಯಿಂದ ವಿಷಯಗಳನ್ನು ಇತ್ಯರ್ಥಪಡಿಸಲು ಸರ್ಕಾರಗಳಿಗೆ ಅಲ್ಲಾಹನು ಬುದ್ಧಿ ನೀಡಲಿ. ಅಂತರರಾಷ್ಟ್ರೀಯ ಒಪ್ಪಂದಗಳನ್ನು ಪಾಲಿಸುವವರಾಗಲಿ. ಇಂದು ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ನ್ಯಾಯ ಸಿಗುವುದು ಸುಲಭವಲ್ಲ. ಆದರೂ ಅಲ್ಲಾಹನು ಅಂತರರಾಷ್ಟ್ರೀಯ ಸಂಸ್ಥೆಗಳಿಗೂ ಹಾಗೂ ಎರಡೂ ಪಕ್ಷಗಳ ಬಗ್ಗೆ ಸಹಾನುಭೂತಿ ಹೊಂದಿರುವವರಿಗೆ ಮತ್ತು ಸ್ನೇಹಿತರಿಗೆ ಕೂಡ ದೇಶಗಳ ನಡುವಿನ ವಿಷಯಗಳನ್ನು ಬಗೆಹರಿಸಲು ಸೌಭಾಗ್ಯ ನೀಡಲಿ. ಅಲ್ಲಾಹನು ಎರಡೂ ದೇಶದವರಿಗೂ ಬುದ್ಧಿ ನೀಡಲಿ. ಯುದ್ಧವಾದರೆ ಎರಡೂ ಕಡೆಗಳಲ್ಲಿ ನಷ್ಟವಾಗುತ್ತದೆ. ಆಗ ಸೈನಿಕರು ಮಾತ್ರವಲ್ಲ, ಸಾಮಾನ್ಯ ಜನರು ಮತ್ತು ಪೀಡಿತರು ಕೂಡ ವಿನಾ ಕಾರಣ ಕೊಲ್ಲಲ್ಪಡುತ್ತಾರೆ. ಇದನ್ನೇ ನಾವು ಇಂದಿನ ಯುದ್ಧಗಳಲ್ಲಿ ನೋಡುತ್ತಿದ್ದೇವೆ. ಇದೇ ಎಲ್ಲೆಡೆ ನಡೆಯುತ್ತಿದೆ. ಏನೇ ಇರಲಿ, ಲೋಕದ ಎಲ್ಲ ಪೀಡಿತರಿಗಾಗಿ ದುಆ ಮಾಡಿರಿ. ಜಗತ್ತು ವಿನಾಶದ ಅಂಚಿನಲ್ಲಿ ನಿಂತಿರುವುದಾಗಿ ನಾವು ಕಾಣುತ್ತಿದ್ದೇವೆ. ಅಲ್ಲಾಹನೇ ಅದನ್ನು ವಿನಾಶದಿಂದ ರಕ್ಷಿಸಲಿ. ಲೋಕಜನರು ಅಲ್ಲಾಹನ ಕಡೆಗೆ ಬಾಗುವವರಾಗುವಾಗ ಮಾತ್ರ ಅದು ಸಾಧ್ಯವಾಗುವುದು. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ ಮತ್ತು ನಮಗೂ ದುಆ ಮಾಡುವ ಸೌಭಾಗ್ಯ ನೀಡಲಿ.

ಕೊನೆಯಲ್ಲಿ ಹುಝೂರ್ ಖಸೂರ್ ಜಿಲ್ಲೆಯ ಭಲೀರ್ ಪ್ರದೇಶದ ಮುಹಮ್ಮದ್ ಆಸಿಫ್ ಸಾಹಿಬ್‌ರ ಪುತ್ರ ರಫೀಕ್ ಅಹ್ಮದ್ ಸಾಹಿಬ್‌ರ ಕುರಿತು ಪ್ರಸ್ತಾಪಿಸಿದರು ಮತ್ತು ಜನಾಝ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು. ಅಹ್ಮದಿಯತ್ತಿನ ವಿರೋಧಿಗಳು ಏಪ್ರಿಲ್ 24ರಂದು ಅವರನ್ನು ಗುಂಡಿಕ್ಕಿ ಶಹೀದ್ ಮಾಡಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹುತಾತ್ಮರಾದಾಗ ಅವರಿಗೆ ಹತ್ತೊಂಬತ್ತು ವಯಸ್ಸು ಇತ್ತು. ಅವರು ಸಾತ್ವಿಕ, ವಿಧೇಯ, ಧೈರ್ಯಶಾಲಿ, ಖುದ್ದಾಮುಲ್ ಅಹ್ಮದಿಯಾದ ಕೆಲಸಗಳಲ್ಲಿ ಭಾಗವಹಿಸುವವ, ನಗುಮುಖದ, ಉತ್ತಮ ಸ್ವಭಾವದ, ಉತ್ತಮ ಗುಣವುಳ್ಳ, ಖಿಲಾಫತನ್ನು ಪ್ರೀತಿಸುವ ಯುವಕ ಆಗಿದ್ದರು. (ಅವರ ಮಗ್ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

(ಹುಝೂರ್ ಹೇಳಿದರು:) ಪಾಕಿಸ್ತಾನದಲ್ಲಿ ಭಯೋತ್ಪಾದಕರ ಮತ್ತು ಜಮಾಅತನ್ನು ವಿರೋಧಿಸುವವರ ಧೈರ್ಯ ಹೆಚ್ಚುತ್ತಿದೆ. ಅಲ್ಲಾಹನು ಶೀಘ್ರದಲ್ಲೇ ಅವರನ್ನು ಹಿಡಿಗೂಡಲಿ.

*****

اَلْحَمْدُ لِلّٰہِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَاءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

At, ***'Masjid Mubarak'***, *Islamabad, Tilford*, U.K. On 02-05-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon